




# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

### ೧ ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವ

**ದಿಗ್‌ಬಾಯ್:** ಜನವರಿ ೨೯ರಂದು ನಡೆದ ಭಕ್ತಸಮ್ಮೇಳನದಲ್ಲಿ ೩೦೦ ಭಕ್ತರು ಭಾಗವಹಿಸಿದ್ದರು. **ಇಂದೋರ್:** ಹಿರಾಪುರ್ ಮತ್ತು ಖರ್ಗೋನ್ ಜಿಲ್ಲೆಗಳ ೭ ಶಾಲೆಗಳು ಇಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದವು. **ಪುರುಲಿಯಾ:** ೩ ದಿನಗಳ ಗ್ರಾಮೀಣ ಉತ್ಸವ ನಡೆಯಿತು. ಕೃಷಿಕರ ಸಮ್ಮೇಳನ, ಯುವ ಸಮ್ಮೇಳನ, ಮಹಿಳೆಯರ ಮತ್ತು ಮಕ್ಕಳ ಸಮ್ಮೇಳನ ನಡೆದವು. ನಾರಾಯಣ ಸೇವೆ ಕೂಡ ನಡೆಯಿತು. ಸುಮಾರು ೪೦,೦೦೦ ಜನರು ಭಾಗವಹಿಸಿದ್ದರು (ಫೆ ೪-೬). **ರಾಜ್‌ಕೋಟ್:** ಫೆಬ್ರವರಿ ೫ ರಂದು 'ರಾಮಕೃಷ್ಣ ಮಿಷನ್-ಆದರ್ಶ ಹಾಗೂ ಚಟುವಟಿಕೆ' ಎಂಬ ವಿಷಯ ಕುರಿತ ಸಾರ್ವಜನಿಕ ಸಭೆ ನಡೆಯಿತು. ೧೨೫ ಸಂನ್ಯಾಸಿಗಳು, ೧೫೦೦ ಭಕ್ತರು ಭಾಗವಹಿಸಿದ್ದರು.

### ೨. ಶಾಖಾ ಕೇಂದ್ರಗಳ ಚಟುವಟಿಕೆಗಳು

**ಖೇತ್ರಿ :** ಕೇಂದ್ರ ಸಂಸ್ಕೃತಿ ಸಚಿವರಾದ ಅರ್ಜುನ್ ರಾಮ್ ಮೇಘವಾಲ್ ಅವರು ಸಾಂಸ್ಕೃತಿಕ ಸಂಕೀರ್ಣವನ್ನು ಉದ್ಘಾಟಿಸಿದರು. ಒಳ ಸಭಾಂಗಣ, ಹೊರ ಸಭಾಂಗಣ, ಉದ್ಯಾನ ಇತ್ಯಾದಿಗಳು ಸೇರಿದ್ದವು. **ರಾಜ್‌ಕೋಟ್:** ಫೆಬ್ರವರಿ ೧ ರಿಂದ ೯ರ ವರೆಗೆ ಗುಜರಾತ್ ಸರ್ಕಾರದ ಸಹಯೋಗದೊಂದಿಗೆ ಗುಜರಾತ್‌ನ ಪ್ರಧಾನ ಸ್ಥಳಗಳ ಪ್ರವಾಸವನ್ನು ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳಿಗಾಗಿ ಏರ್ಪಡಿಸಲಾಗಿತ್ತು. ಇದರಲ್ಲಿ ೧೧೬ ಸಂನ್ಯಾಸಿಗಳು ಭಾಗವಹಿಸಿದ್ದರು. **ಸರಿಷಾ:** ಕೇಂದ್ರದ ವರ್ಷಪೂರ್ತಿ ನಡೆದ ಶತಮಾನೋತ್ಸವದ ಸಮಾರಂಭವು ಫೆಬ್ರವರಿ ೩ರಿಂದ ೫ರ ತನಕ ನಡೆಯಿತು. ಮೂರು ದಿನಗಳ ಕಾರ್ಯಕ್ರಮದಲ್ಲಿ ಮೆರವಣಿಗೆ, ಸಾರ್ವಜನಿಕ ಸಭೆ, ಸಾಂಸ್ಕೃತಿಕ ಕಾರ್ಯಕ್ರಮ, ಸಾಧು ಭಂಡಾರ, ನಾರಾಯಣ ಸೇವೆ ಇತ್ಯಾದಿ ನಡೆದವು. ಪ್ರಧಾನ ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು. **ತಂಜಾವೂರು:** ಸ್ವಾಮಿ ವಿವೇಕಾನಂದರು ೧೮೯೭ರಲ್ಲಿ ಭೇಟಿ ನೀಡಿದ ತಂಜಾವೂರು ಹಾಗೂ ಕುಂಭಕೋಣಂ ಪ್ರದೇಶಗಳಲ್ಲಿ ಫೆಬ್ರವರಿ ೩, ೫ ಹಾಗೂ ೭ ರಂದು ಹಲವು ಕಾರ್ಯಕ್ರಮಗಳು ನಡೆದವು. ಇದರಲ್ಲಿ ಮೆರವಣಿಗೆ, ಸಾರ್ವಜನಿಕ ಸಭೆ ಇತ್ಯಾದಿ ಸೇರಿದ್ದವು. **ರಾಂಚಿ ಮೊರಬಾದಿ ಆಶ್ರಮ :** ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ನಾಲ್ಕು ಕೃಷಿ ಮೇಳಗಳನ್ನು ನಡೆಸಿತು. ಇದರಲ್ಲಿ ಸುಮಾರು ೩೦,೦೦೦ ಕೃಷಿಕರು ಭಾಗವಹಿಸಿದ್ದರು. **ದೇವಘರ್ ವಿದ್ಯಾಪೀಠ:** ಕೇಂದ್ರ ಗೃಹಸಚಿವರಾದ ಶ್ರೀ ಅಮಿತ್ ಷಾ ಅವರು ಕೇಂದ್ರಕ್ಕೆ ಭೇಟಿಕೊಟ್ಟರು. **ಬಜೇಪ್ರತಾಪಪುರ:** (ವರ್ಧಮಾನ ಜಿಲ್ಲೆ) ಈ ಕೇಂದ್ರದ ಉಪ-ಕೇಂದ್ರವಾಗಿ ಭಂದರ್‌ದೀಹಿ ಗ್ರಾಮದ ಕೇಂದ್ರವನ್ನು ಪ್ರಧಾನ ಕಾರ್ಯದರ್ಶಿಗಳು ಉದ್ಘಾಟಿಸಿದರು. **ಬಾಂಕುರ:** ಸ್ವಾಮಿ ಶಾರದಾನಂದಜಿ ಮಹಾರಾಜ್ ಅವರ ವಿಗ್ರಹವನ್ನು ಸಂಘದ ಉಪಾಧ್ಯಕ್ಷರಾದ ಸ್ವಾಮಿ ಸುಹಿತಾನಂದಜಿ ಮಹಾರಾಜ್ ಅವರು ಅನಾವರಣಗೊಳಿಸಿದರು. **ದಕ್ಷಿಣೇಶ್ವರ** ಮಠದಲ್ಲಿ ಸಾಧುನಿವಾಸವನ್ನು ಪ್ರಧಾನ ಕಾರ್ಯದರ್ಶಿಗಳು ಫೆ. ೧೮ ರಂದು ಉದ್ಘಾಟಿಸಿದರು. ಈ ಮಠವು ಪ್ರಧಾನ ಕೇಂದ್ರ ಬೇಲೂರು ಮಠದ ಉಪ-ಕೇಂದ್ರವಾಗಿದೆ. **ಕೊಯಮತ್ತೂರು ಮಿಷನ್:** ಈ ಕೇಂದ್ರವು ಕಲಾ ಮತ್ತು ವಿಜ್ಞಾನ ಕಾಲೇಜು ಹಾಗೂ ಮಾರುತಿ ದೈಹಿಕ ಶಿಕ್ಷಣ ಕಾಲೇಜಿಗೆ NAAC A+ದರ್ಜೆಯನ್ನು ಮುಂದಿನ ೫ ವರ್ಷಗಳಿಗೆ ನೀಡಿದೆ. **RKMVERI:**(ವಿವೇಕಾನಂದ ವಿಶ್ವವಿದ್ಯಾಲಯ)ದಲ್ಲಿ AI (Artificial Intelligence) ಹಾಗೂ ಇತರ ತಂತ್ರಜ್ಞಾನದ ಕೇಂದ್ರವನ್ನು ಉದ್ಘಾಟಿಸಲಾಯಿತು.

### ೩. ವಿದೇಶದಲ್ಲಿರುವ ಕೇಂದ್ರಗಳ ಚಟುವಟಿಕೆಗಳು

**ಢಾಕಾ :** ಬಾಂಗ್ಲಾದೇಶದ ಢಾಕಾ ಕೇಂದ್ರದಲ್ಲಿ ಫೆಬ್ರವರಿ ೨೧ ರಿಂದ ೨೪ರ ವರೆಗೆ ಶ್ರೀರಾಮಕೃಷ್ಣರ ಜಯಂತಿ ಕಾರ್ಯಕ್ರಮಗಳು ನಡೆದವು. ಬಾಂಗ್ಲಾದೇಶ ಸರ್ಕಾರದ ಗೃಹಸಚಿವ ಶ್ರೀ ಅಸದುದ್ಜಮಾನ್ ಖಾನ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರಾದ ಡಾ. ಹಸನ್ ಮಹಮೂದ್ ಹಾಗೂ ಇನ್ನಿತರ ಗಣ್ಯರು ಭಾಗವಹಿಸಿದ್ದರು.

### ೪. ಮೌಲ್ಯ ಶಿಕ್ಷಣ ಹಾಗೂ ಯುವ ಸಮ್ಮೇಳನಗಳು

ಅಹಮದಾಬಾದ್, ಕೊಯಮತ್ತೂರು ಮಿಷನ್, ಜೆಮ್‌ಷೆಡ್‌ಪುರ್, ಕೃಷ್ಣನಗರ, ಮದುರೈ, ಮೇದಿನೀಪುರ, ರಾಯಪುರ, ರಾಜ್‌ಕೋಟ್, ವಿಶಾಖಪಟ್ಟಣ ಹಾಗೂ ಯಾದಾದ್ರಿ ಭುವನಗಿರಿ ಕೇಂದ್ರಗಳಲ್ಲಿ ವಿವಿಧ ಮೌಲ್ಯ ಶಿಕ್ಷಣ ಹಾಗೂ ಯುವ ಸಮ್ಮೇಳನಗಳು ನಡೆದವು.

### ೫. ನೇತ್ರ ಚಿಕಿತ್ಸೆ ಹಾಗೂ ಇತರ ವೈದ್ಯಕೀಯ ಚಿಕಿತ್ಸೆ ಶಿಬಿರಗಳು

ಈ ಕೆಳಗಿನ ಕೇಂದ್ರಗಳು ನೇತ್ರ ಹಾಗೂ ವೈದ್ಯಕೀಯ ಚಿಕಿತ್ಸೆಯ ಶಿಬಿರಳನ್ನು ನಡೆಸಿದವು: ಬಾಂಕುರ, ಕೊಯಮತ್ತೂರು ಮಿಷನ್, ದಿಗ್‌ಬಾಯ್, ಹಲಸೂರು, ಹತಮನಿಗುಡ, ಜೈಪುರ, ಜೆಮ್‌ಷೆಡ್‌ಪುರ, ಕಂಖಲ್, ಖೇತ್ರಿ , ಲಕ್ನೋ, ಮದುರೈ, ಮಾನಸದ್ವೀಪ, ನೌರಾ, ಪೋರ್‌ಬಂದರ್, ಪುರಿ ಮಠ, ರಾಂಚಿ ಮೊರಬಾದಿ, ಸೇಲಂ ಹಾಗೂ ತಂಜಾವೂರು.


Managing Editor : Swami Muktidananda    Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020